


## ಹೈಟೆಕ್ ಆರೋಗ್ಯ ಸೇವೆ

ಆರೋಗ್ಯ ಸೇವೆಯ ಕ್ಷೇತ್ರದಲ್ಲಿ ಐಒಟಿ ದೊಡ್ಡಕ್ರಾಂತಿಯನ್ನೇ ಮಾಡಿದೆ. ಹೆಲ್ತ್ ಬ್ಯಾಂಡ್‌ನಿಂದ ಹಿಡಿದು ಹೃದಯದ ಪೇಸ್ ಮೇಕರ್, ಬಿಪಿ ಮಾನಿಟರ್ ಮಶೀನ್, ಗ್ಲುಕೋಮೀಟರ್, ಇಸಿಜಿ ಮಶೀನ್‌ಗಳನ್ನೆಲ್ಲಾ ಅಂತರ್ಜಾಲಕ್ಕೆ ಸೇರಿಸಿ ಆಯಾ ವಸ್ತುಗಳು ನೀಡುವ ಮಾಹಿತಿಯನ್ನು ಇಂಟರ್ನೆಟ್ ಮೂಲಕ ವೈದ್ಯರಿಗೆ ತಲುಪಿಸಿ, ಅವರು ಆ ಮಾಹಿತಿಯನ್ನು ತಾವಿರುವ ಜಾಗದಿಂದಲೇ ವಿಶ್ಲೇಷಿಸಿ, ಸಾಮಾನ್ಯ ಹಾಗೂ ತುರ್ತು ಸಂದರ್ಭಗಳೆರಡರಲ್ಲೂ ರೋಗಿಗೆ ನೆರವಾಗಬಹುದು.

ಐಒಟಿಯಿಂದ ಊಹಿಸಲು ಸಾಧ್ಯವಾಗದಷ್ಟು ಅನುಕೂಲಗಳಿವೆ. ಐಒಟಿಯಿಂದ ನಾವು ಧರಿಸಿರುವ ಬ್ಯಾಂಡ್‌ಗಳು ನಮ್ಮ ದೈಹಿಕ ಹಾಗೂ ಮಾನಸಿಕ ಆರೋಗ್ಯದ ಕುರಿತು ಸರಿಯಾದ ಮಾಹಿತಿ ನೀಡುತ್ತವೆ. ಆಫೀಸ್ ಆಡಳಿತ, ಸಹಾಯಕ ಸಿಬ್ಬಂದಿ ಮತ್ತು ನಿರ್ವಹಣೆಯನ್ನು ನೋಡಿಕೊಳ್ಳುತ್ತಿರುವ ಜನರ ಬದಲಾಗಿ ಟೆಕ್ನಾಲಜಿಯೇ ಕೆಲಸ ಮಾಡಲಿದೆ. ಇದರಿಂದಾಗಿ 2021ರ ವೇಳೆಗೆ ಸುಮಾರು ಒಂದೂವರೆ ಲಕ್ಷ ಉದ್ಯೋಗಗಳು ನಷ್ಟವಾಗಲಿವೆ ಎನ್ನಲಾಗಿದೆ. ಐಒಟಿಯಿಂದ ಪ್ರಾಡ್‌ಕ್ಟ್ ಮ್ಯಾನೇಜರ್ಸ್, ರೊಬಾಟ್ ಸಂಯೋಜಕರು, ಕೈಗಾರಿಕಾ ಪ್ರೋಗ್ರಾಮರ್ಸ್ ಮತ್ತು ನೆಟ್‌ವರ್ಕ್ ಎಂಜಿನಿಯರುಗಳಿಗೆ ಹೆಚ್ಚಿನ ಉದ್ಯೋಗಗಳು ರೂಪುಗೊಳ್ಳಲಿವೆ.



ಆಫ್ ಮಾಡುವ ವ್ಯವಸ್ಥೆ ಹೊಂದಿರುವ ಎಲ್ಲ ವಸ್ತುಗಳು ಐಒಟಿ ವ್ಯಾಪ್ತಿಗೆ ಬರುತ್ತವೆ. ಉನ್ನತ ವೇಗ ಮತ್ತು ಅಪಾರ ಪ್ರಮಾಣದ ದತ್ತಾಂಶ ಸಾಗಣೆಯ ಶಕ್ತಿ ಹೊಂದಿರುವ ಅಂತರ್ಜಾಲವೇ ಐಒಟಿಯ ಬೆನ್ನೆಲುಬು.

1974ರಲ್ಲಿ ಬಳಕೆಗೆ ಬಂದ ಹಣ ಸಂದಾಯಿಸುವ ATM ಮೆಶೀನ್‌ಗಳೇ ಪ್ರಪಂಚದ ಮೊದಲ ಐಒಟಿ ಸಾಧನಗಳು. ಅವುಗಳಲ್ಲಿ ಸೆನ್ಸಾರ್ ಮತ್ತು ಚಿಪ್‌ಗಳು ಇರುತ್ತವೆಯಾದ್ದರಿಂದ ಇಂಟರ್ನೆಟ್ ಮೂಲಕ ಅವನ್ನು ನಿಯಂತ್ರಿಸಬಹುದಾಗಿದೆ. ಸ್ಮಾರ್ಟ್‌ವಾಚ್, ಸ್ಮಾರ್ಟ್ ಕನ್ನಡಕ, ಫಿಟ್‌ನೆಸ್ ಬ್ಯಾಂಡ್, ವರ್ಚುವಲ್ ರಿಯಾಲಿಟಿ ಹೆಡ್‌ಬ್ಯಾಂಡ್, ಮಲ್ಟಿಮೀಡಿಯಾ ಹೆಡ್‌ಬ್ಯಾಂಡ್, ಸ್ಮಾರ್ಟ್ ಮನೆಗಳು, ಸ್ಮಾರ್ಟ್‌ಕಾಫಿ ಮೇಕರ್, ಫ್ರಿಡ್ಜ್, ಎಸಿ ಯುನಿಟ್, ಟ್ರೆಡ್‌ಮಿಲ್, ಯುಪಿಎಸ್, ಐರನ್ ಬಾಕ್ಸ್, ಟೆಲಿವಿಷನ್, ಟ್ಯಾಬ್, ಲೈಟ್, ಗೀಸರ್, ಚಿಮಣಿ, ಫ್ಯಾನ್, ವ್ಯಾಕ್ಯೂಮ್ ಕ್ಲೀನರ್, ಮನೆಯ ಹೊರಗಿನ ಸ್ಮಾರ್ಟ್‌ಕಾರ್, ಸ್ಕೂಟರ್, ಬೇಬಿ ಕಾರ್, ಎಲೆಕ್ಟ್ರಿಕ್ ಸ್ಕೂಟರ್, ಸ್ಮಾರ್ಟ್ ಮನೆಗಳು, ಸ್ಮಾರ್ಟ್ ಸಿಟಿ, ಸ್ಮಾರ್ಟ್‌ಕಿಚನ್‌ಗಳನ್ನೆಲ್ಲಾ ಅಂತರ್ಜಾಲದ ಮೂಲಕ ಸಂಪರ್ಕದಲ್ಲಿರಿಸಿ, ನಿಯಂತ್ರಿಸಿ ಅವುಗಳಿಂದ ನೈಜ ಸಮಯದಲ್ಲಿ ಸೇವೆ ಪಡೆಯಬಹುದಾಗಿದೆ. ವಿಮಾನದ ಜೆಟ್‌ಎಂಜಿನ್ ಮತ್ತು ಬಾವಿಯಿಂದ ಎಣ್ಣೆ ತೆಗೆಯುವ ಬೈರಿಗೆಗೂ ‘ಐಒಟಿ’ ಅನ್ವಯಿಸುತ್ತದೆ. ಐಒಟಿಯ ತಂತ್ರಜ್ಞಾನವು ವೈವಿಧ್ಯಮಯ ಮತ್ತು ವಿಶಾಲ ಶ್ರೇಣಿಯ ಅಪ್ಲಿಕೇಶನ್‌ಗಳನ್ನು ಹೊಂದಿದ್ದು ಅದರಲ್ಲಿ ಗ್ರೀನ್‌ಬಿಲ್ಡಿಂಗ್, ಸ್ಮಾರ್ಟ್‌ಗ್ರಿಡ್, ಸ್ಮಾರ್ಟ್ ಉತ್ಪಾದನೆ, ಕೈಗಾರಿಕಾ ಮೇಲ್ವಿಚಾರಣೆ, ಕೃಷಿ, ಸ್ಮಾರ್ಟ್ ಹೋಮ್, ಸ್ಮಾರ್ಟ್ ಸಿಟಿ, ಆರೋಗ್ಯ ಸೇವೆ, ಸಂಪರ್ಕಿತ ಮನೆಗಳು, ಸುರಕ್ಷತೆ, ಭದ್ರತೆ, ಅರಣ್ಯ ಮತ್ತು ವನ್ಯಜೀವಿ, ಆಟೋಮೋಟಿವ್, ಮಾಧ್ಯಮ ಹಾಗೂ ಪ್ರಕೃತಿ ವಿಕೋಪದ ಸಂದರ್ಭಗಳಲ್ಲೂ ಐಒಟಿಯ ಉಪಯೋಗವಾಗಲಿದೆ.

ಕೇಂದ್ರ ಸರ್ಕಾರ ಐಒಟಿಯ ಕುರಿತು 2015ರಲ್ಲಿ ಕರಡು ನೀತಿಯನ್ನು ನಿರೂಪಿಸಿದೆ. ಅದರಲ್ಲಿ ‘ಡಿಜಿಟಲ್ ಇಂಡಿಯಾ’ವೂ ಸೇರಿದ್ದು ವಿಶ್ವ ಐಒಟಿ ಕ್ಷೇತ್ರದ ವಹಿವಾಟಿಗೆ ಕೆಲವು ಶತಕೋಟಿ ಡಾಲರ್‌ಗಳ ಕೊಡುಗೆ ನೀಡುವ ಗುರಿ ಹೊಂದಿದೆ. 2016ರಲ್ಲಿ ಆಂಧ್ರಪ್ರದೇಶ ರಾಜ್ಯದ ಸರ್ಕಾರ ಮೊಟ್ಟಮೊದಲಿಗೆ ಐಒಟಿ ನೀತಿಯನ್ನು ಪ್ರಕಟಿಸಿದೆ. ಅಮೆರಿಕದ ಜೆಸ್ಪರ್ ಟೆಕ್ನಾಲಜೀಸ್‌ನೊಂದಿಗೆ ವ್ಯಾಪಾರ ಒಪ್ಪಂದ ಮಾಡಿಕೊಂಡಿರುವ ರಿಲಯನ್ಸ್ ಕಮ್ಯುನಿಕೇಶನ್ಸ್, ಭಾರತಕ್ಕೆ ಐಒಟಿ